ವ್ಯವಸ್ಥೆ ಮಾಡಿ, ಸ್ಟೋರ್ ವೇರ್ ಪೈಪ್ ಹಾಕಿ, ಬೇರೆ ಬೇರೆ ಕಡೆ ತೆಗೆದುಕೊಂಡು ಹೋಗಿ ಬಿಟ್ಟಿದ್ದೇವೆ. ಅವರು ಹೇಳುವಂತಾದ್ದು, ಈ ಕಾರ್ಯ ಆಗಿಲ್ಲ ಉಳಿದಿದೆ ಎಂದು, ಅದನ್ನು ಮುಂದೆ ಮಾಡಿಸಿಕೊಡುತ್ತೇವೆ.

ವಿಷಯ:- ಬಳ್ಳಾರಿಯ ಲಾಲ್ ಬಹದ್ದೂರ್ ಶಾಸ್ತ್ರಿ ವಾಣಿಜ್ಯ ಸಂಕೀರ್ಣದ ಮಳಿಗೆಗಳ ಹಂಚಿಕೆ.

276 (1878) ಶ್ರೀ ಎಂ. ದಿವಾಕರ ಬಾಬು (ಬಳ್ಳಾರಿ ನಗರ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಲಾಲ್ ಬಹದ್ದೂರ್ ಶಾಸ್ತ್ರಿ ವಾಣಿಜ್ಯ ಸಂಕೀರ್ಣ (ಷಾಪಿಂಗ್ ಕಾಂಪ್ಲೆಕ್ಸ್)ದಲ್ಲಿ ವಿವಿಧ ಮಾದರಿಯ ವಾಣಿಜ್ಯ ಮಳಿಗೆಗಳನ್ನು ಹಂಚಿಕೆ ಮಾರಾಟ ಮಾಡಲು ಪ್ರಕಟಣೆ ನೀಡಲಾಗಿದ್ದಿದ್ದು ನಿಜವೇ?

ಆ) ಹಾಗಿದ್ದಲ್ಲಿ ಯಾವ ಯಾವ ಮಾದರಿಯ ಮತ್ತು ಎಷ್ಟೆಷ್ಟು ಅಳತೆಯ ಎಷ್ಟೆಷ್ಟು ನಿವೇಶನಗಳನ್ನು ಮಾರಾಟ ಮಾಡಲು ಪ್ರಕಟಿಸಲಾಗಿತ್ತು?

ಇ) ಇದಕ್ಕೆ ನೊಂದಣಿ ಶುಲ್ಕ ಎಷ್ಟು ರೂ.ಗಳನ್ನು ನಿಗದಿಮಾಡಿತ್ತು?

ಈ) ಎಷ್ಟು ಜನರು ಅರ್ಜಿಗಳನ್ನು ಸಲ್ಲಿಸಿದ್ದರು? ಎಷ್ಟು ಜನರಿಗೆ ಮಳಿಗೆಗಳನ್ನು ನೀಡಲಾಗಿದೆ? ಯಾವ ಷರತ್ತಿನ ಮೇಲೆ ನೀಡಲಾಗಿದೆ?

ಉ) ಮಳಿಗೆ ಹಂಚಿಕೆಯಾಗದವರ ನೋಂದಣಿ ಶುಲ್ಕ ಹಿಂದಿರುಗಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಊ) ಈ ವಾಣಿಜ್ಯ ಮಳಿಗೆಯನ್ನು ಪಾರ್ಕ್ (ದಿ ಗ್ರೀನ್ ಬೆಲ್ಟ್)ನಲ್ಲಿ ಕಟ್ಟುತ್ತಿರುವುದಕ್ಕೆ ಸರ್ಕಾರದಿಂದ ಭೂ ಬದಲಾವಣೆ ಮಾಡಲಾಗಿದೆಯೇ?

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-

ಅ) ಹೌದು,

ಆ)

ಮಾದರಿ	ಮಹಡಿ	ಅಳತೆ	ಸಂಖ್ಯೆ
ಎ	ನೆಲ ಮಹಡಿ	16.9 x 16 ಅಡಿ	32
ಬಿ	ಅದೇ	11 x 13 ಅಡಿ	32
ಸಿ	ಮೊದಲ ಮಹಡಿ	16.9 x 13 ಅಡಿ	32
ಡಿ	ಮೊದಲ ಮಹಡಿ	11 x 13 ಅಡಿ	32

ಇ)	ಮಾದರಿ	ನೊಂದಣಿ ಶುಲ್ಕ
	ಎ	ರೂ. 2000-00
	ಬಿ	ರೂ. 1000-00
	ಸಿ	ರೂ. 2500-00
	ಡಿ	ರೂ. 1250-00

ಈ) ಅರ್ಜಿ ಸ್ವೀಕರಿಸುವುದಕ್ಕೆ ದಿನಾಂಕ: 9-8-1996 ರಂದು ಕೊನೆಯ ದಿವಸವಾಗಿರುವುದರಿಂದ ಈ ಪ್ರಶ್ನೆಯಲ್ಲಿ ಕೇಳಿರುವ ಮಾಹಿತಿಯನ್ನು ಈ ಹಂತದಲ್ಲಿ ತಿಳಿಸಲು ಸಾಧ್ಯವಾಗುವುದಿಲ್ಲ.

ಉ) ಮಳಿಗೆಗಳ ಹಂಚಿಕೆಗೆ ಅರ್ಜಿ ಸ್ವೀಕರಿಸಲು ಕೊನೆಯ ದಿನಾಂಕ: 9-8-1996 ಆಗಿದೆ. ಹಂಚಿಕೆಯ ಕಾರ್ಯ ಮುಗಿದ ನಂತರ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

ಊ) ವಾಣಿಜ್ಯ ಮಳಿಗೆಗಳನ್ನು ಹಸಿರು ವಲಯದಲ್ಲಿ ಕಟ್ಟುತ್ತಿರುವುದಿಲ್ಲ. ಸರ್ಕಾರದ ಆದೇಶ ಸಂ: ಆರ್‌ಡಿ 10 ಎಲ್‌ಜಿಇ 92 ದಿನಾಂಕ: 28-9-1992ರಲ್ಲಿ ಕಛೇರಿ ಕಟ್ಟಡ ಕಟ್ಟಲು ಸರ್ಕಾರದಿಂದ ಮಂಜೂರಾಗಿರುವ 5.46 ಎಕರೆ ಪ್ರದೇಶದಲ್ಲಿ ಕಟ್ಟಲಾಗುತ್ತಿದೆ.

ಶ್ರೀ ಎಂ. ದಿವಾಕರಬಾಬು:- ಅಧ್ಯಕ್ಷರೇ, ಈ ಪ್ರಾಧಿಕಾರದಲ್ಲಿ ಜನರಲ್ಲಿ ವಸೂಲಿ ಮಾಡುವುದಕ್ಕೆ ಅಥವಾ ಲೂಟಿ ಮಾಡುವುದಕ್ಕೆ ಹೊಸ ಸ್ಕೀಮ್ ಹಾಕಿದ್ದಾರೆಯೇ ಎಂದು ಕೇಳುತ್ತಿದ್ದೇನೆ. ಏನೆಂದರೆ, ರಿಜಿಸ್ಟ್ರೇಷನ್ ಫೀ ಒಂದೊಂದು ಅಪ್ಲಿಕೇಷನ್‌ಗೆ ಒಂದು ಸಾವಿರ, ಎರಡು ಸಾವಿರ, ಎರಡು ಸಾವಿರದ ಐದುನೂರು, ಒಂದು ಸಾವಿರದ ಐನೂರ ಐವತ್ತು ಒಂದೊಂದು ಕೆಟಗರಿಗೆ ಇಟ್ಟಿದ್ದಾರೆ. ಅಪ್ಲಿಕೇಷನ್ 15-4-96ಕ್ಕೆ ಮುನ್ನೂರರ ಮೇಲ್ಪಟ್ಟು ಬಂದಿವೆ. ಇರುವ ಸೈಟುಗಳು 128. ರಿಜಿಸ್ಟ್ರೇಷನ್ ಫೀ ವಾಪಸ್ ಕೊಡುವುದಿಲ್ಲವೆಂದು ಮತ್ತೆ ಕಂಡೀಷನ್ ಇಟ್ಟಿದ್ದಾರೆ. ಇಷ್ಟು ಜನ ಅಪ್ಲಿಕೇಷನ್ಸ್ ಹಾಕಿದ್ದಾರೆ, ಈ ಹಣವನ್ನು ಪ್ರಾಧಿಕಾರ ದವರು ನಿವೇಶನಗಳು, ಸೈಟುಗಳು ಸಿಗಲಾರದವರಿಗೆ ವಾಪಸ್ ಕೊಡಬೇಕಾಗುತ್ತದೆ. ಆದರೆ, ಅವರ ಪ್ರಕಟಣೆಯಲ್ಲಿ, ವಾಪಸ್ ಕೊಡುವಹಾಗಿಲ್ಲ ಎಂದು ಹೇಳುತ್ತಾರೆ. ಇದು ನನಗೆ ಅರ್ಥವಾಗಲಿಲ್ಲ. ಸರ್ಕಾರ ಏನು ಹೊಸ ರೀತಿ ಮಾಡುತ್ತಿದ್ದಾರೆಯೇ ಮತ್ತೆ ಇನ್ನೊಂದು, ಈಗ ಹೊಸದಾಗಿ ಕಾಂಪ್ಲೆಕ್ಸ್ ಕಟ್ಟುತ್ತಿದ್ದಾರೆ. ಅದನ್ನು ಗ್ರೀನ್ ಬೆಲ್ಟ್‌ನೊಳಗೆ ಕಟ್ಟುತ್ತಾ ಇಲ್ಲವೆಂದು ಹೇಳುತ್ತಿದ್ದಾರೆ. ಎಷ್ಟು ಸಲ ಮಾಹಿತಿಯನ್ನು ಸರ್ಕಾರದವರು ನಮಗೆ ಕೊಡುತ್ತಿದ್ದಾರೆಂಬುದನ್ನು ತಮಗೆ ತಿಳಿಸುತ್ತಿದ್ದೇನೆ; ಇಲ್ಲಿ ಪ್ರಾಕ್ಟಿಕಲ್ಲಾಗಿ ಸಚಿವರೇ ಬಂದು ನೋಡಿದರೆ ಗೊತ್ತಾಗುತ್ತದೆ. ಪಾರ್ಕ್ ಪಕ್ಕಡೆಯೇ ಷಾಪಿಂಗ್ ಕಾಂಪ್ಲೆಕ್ಸ್ ಕಟ್ಟುತ್ತಿದ್ದಾರೆ. ಇಷ್ಟು ಅವರು ಚೇಂಜ್ ಆಫ್ ಲ್ಯಾಂಡ್ ಯೂಸ್ ಮಾಡಲಾರದೆ, ಪ್ರಾಧಿಕಾರದವರೇ ಮಾಡಿದರೆ, ಬೇರೆ ಜನ ಮಾಡುವುದರಲ್ಲಿ ತಪ್ಪಿಲ್ಲವೆಂದು ನನಗನ್ನಿಸುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೇ, 1992ರಲ್ಲಿ 5 ಎಕರೆ 46 ಗುಂಟೆ ಪ್ರದೇಶದಲ್ಲಿ ಬಳ್ಳಾರಿಯಲ್ಲಿ ಲಾಲ್ ಬಹದ್ದೂರ್ ಶಾಸ್ತ್ರಿಯವರ ಹೆಸರಿನಲ್ಲಿ ಮಳಿಗೆಗಳನ್ನು ಮತ್ತು ಅವರ ಕಛೇರಿಯನ್ನು ಕಟ್ಟತಕ್ಕಂಥಾದ್ದು ಇದಕ್ಕೆ ಸುಮಾರು 80 ಲಕ್ಷ ರೂಪಾಯಿಗಳ ಮಂಜೂರಾತಿ ಆಗಿ ಇದನ್ನು 1995ರಲ್ಲಿ ಪೂರ್ತಿಯಾಗಿ ನಿಗಮಕ್ಕೆ ವಹಿಸಿ ಕೊಡಲಾಗಿದೆ. ಅದರಲ್ಲಿ ಮಳಿಗೆಗಳನ್ನು ಕಟ್ಟುವಂಥಾದ್ದಕ್ಕೆ ಎ.ಬಿ.ಸಿ.ಡಿ. ಕೆಟಗರಿಯಲ್ಲಿ ಸುಮಾರು 128 ಮಳಿಗೆಗಳನ್ನು 16 ಮತ್ತು 9 ಹಾಗೂ 11 ಮತ್ತು 13 ಅಡಿಗಳಲ್ಲಿ ವಾಣಿಜ್ಯ ಮಳಿಗೆಗಳನ್ನು ಕಟ್ಟುವುದಕ್ಕೆ ಕರೆದಿದ್ದೇವೆ. ಮಾನ್ಯ ಸದಸ್ಯರಾದ ದಿವಾಕರ ಬಾಬುರವರು ಹೇಳಿದ ಹಾಗೆ ಇದರಲ್ಲಿ ಸುಮಾರು 271 ಅರ್ಜಿಗಳು ಬಂದಿವೆ. ಇದರಲ್ಲಿ ಹಣ ವಾಪಸ್ಸು ಕೊಡುವುದಿಲ್ಲ ಎನ್ನುವುದು ತಪ್ಪು ಇದೆ. ನಾವು ಯಾವಾಗ ಮಳಿಗೆಗಳನ್ನು ಕೊಡುವುದಿಲ್ಲವೋ ಆಗ ಅವರಿಗೆ ವಾಪಸ್ಸು ಕೊಡಬೇಕಾಗುತ್ತದೆ. ತಾವು ಹೇಳಿರುವಂತಾದ್ದು ಸರಿಯಾಗಿದೆ. ಆದರೆ ಅವರ ಕಂಡೀಷನ್‌ನಲ್ಲಿ ತಪ್ಪು ಮಾಡಿದ್ದಾರೆ. ಅದರಲ್ಲಿ ಲೋಪ ಇದೆ ನಾನು ನೋಡಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಸುಮಾರು 82 ಸಾವಿರ ಅರ್ಜಿಗಳು ಬಂದಿವೆ. ಅಂದರೆ ಎಲ್ಲರಿಗೂ ನಿವೇಶನ ಕೊಡುತ್ತೇವೆ ಎಂದು ಅಲ್ಲ. ನಿವೇಶನ ಕೊಡದೇ ಇದ್ದರೆ ಅವರ ಹಣವನ್ನು ವಾಪಸ್ಸು ಕೊಡಬೇಕು. ನಿಬಂಧನೆಯಲ್ಲಿ ತಪ್ಪು ಮಾಡಿದ್ದಾರೆ. ನಾವು ದಿನಾಂಕ 9-8-96ರವರೆಗೂ ಅರ್ಜಿ ಹಾಕಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ನಿಯಮಾವಳಿಗಳನ್ನು ಅನುಸರಿಸಿ ಯಾರಿಗೆ ವಾಣಿಜ್ಯ ಮಾಳಿಗೆಗಳು ಸಿಗುವುದಿಲ್ಲವೋ ಅವರಿಗೆ ಆ ಹಣ ವಾಪಸ್ಸು ಕೊಡುತ್ತೇವೆ. ಆ ಹಣ ಮುಟ್ಟುಗೋಲು ಹಾಕಿಕೊಳ್ಳುವುದಿಲ್ಲ. ಇವರು ಹಣ ಮುಟ್ಟುಗೋಲು ಹಾಕಿಕೊಳ್ಳುತ್ತಾರೆ ಎಂದು ತಾವು ತಿಳಿಸಿದ್ದೀರಿ. ಆದರೆ ನಾವು ಹಣ ಮುಟ್ಟುಗೋಲು ಹಾಕಿಕೊಳ್ಳುವುದಿಲ್ಲ. ಇನ್ನೊಂದು ಅವರು 5 ಎಕರೆ 46 ಗುಂಟೆ ಪ್ರದೇಶ ಏನು ಇದೆ ಅದು ಗ್ರೀನ್ ಬೆಲ್ಟ್ ಏರಿಯಾದಲ್ಲಿ ಮಾಡಿದ್ದಾರೆ ಎಂದು ಹೇಳಿದ್ದಾರೆ. ಅದು ಗ್ರೀನ್ ಬೆಲ್ಟ್ ಅಲ್ಲ. ಆದ್ದರಿಂದ ಭೂ ಬದಲಾವಣೆ ಮಾಡುವ ಪ್ರಶ್ನೆ ಇದರಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಎಂ. ದಿವಾಕರಬಾಬು:- ಹಣ ಖರ್ಚು ಮಾಡಿ ಅವರು ಮಕ್ಕಳ ಉದ್ಯಾನವನ ಮಾಡಿದ್ದಾರೆ. ಮತ್ತೇ ಇವರು ಅದೇ ಪಾರ್ಕಿನಲ್ಲಿ ಶಾಪಿಂಗ್ ಕಾಂಪ್ಲೆಕ್ಸ್ ಕಟ್ಟುತ್ತಿದ್ದಾರೆ ಅಂದರೆ ಒಂದು ಸಾರಿ ಪಾರ್ಕ್ ಮಾಡಿದ ಮೇಲೆ ಅದು ಗ್ರೀನ್‌ಬೆಲ್ಟ್ ಆಗುತ್ತದೆ.

ಅಧ್ಯಕ್ಷರು:- ಪಾರ್ಕ್ ಇದ್ದಲ್ಲಿ ಗ್ರೀನ್‌ಬೆಲ್ಟ್ ಆಗುವುದಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ:- ಉದ್ಯಾನವನಗಳನ್ನು ಮತ್ತು ಕೆಲವು ಪ್ರದೇಶಗಳನ್ನು ಕೈಗಾರಿಕಾ ವಲಯ, ವಾಣಿಜ್ಯ ವಲಯ, ವಸತಿವಲಯ ಮತ್ತು ಅರೆಸಾಲಿಕ ಉಪಯೋಗ ವಲಯಗಳು ಇವೆಲ್ಲಾ ನಮ್ಮ ಪ್ರಾಧಿಕಾರದಲ್ಲಿ ಬರುವಂತಹ ವಿಷಯಗಳು. ಉದ್ಯಾನವನಗಳನ್ನು ನಾವು ಬೇರೆ ಕಡೆಗೆ ಬದಲಾಯಿಸಿಕೊಳ್ಳಬಹುದು. ಇಲ್ಲಾ ಅಂದರೆ ಅಷ್ಟೇ ಜಾಗದಲ್ಲಿ ನಾವು ಬೇರೆ ಕಡೆ ಪಾರ್ಕ್ ಮಾಡಿಕೊಳ್ಳಬಹುದು. ಆ ರೀತಿಯಲ್ಲಿ ಪ್ರಾಧಿಕಾರಕ್ಕೆ ಅನುಕೂಲವಾಗುವ ರೀತಿಯಲ್ಲಿ ಮಾಡಿದ್ದೇವೆ.

ಶ್ರೀ ಎಂ. ದಿವಾಕರಬಾಬು:- ಮಾನ್ಯ ಅಧ್ಯಕ್ಷರೇ, ದಿನಾಂಕ 15-4-96ಕ್ಕೆ ಸುಮಾರು 250 ಅರ್ಜಿಗಳು ಬಂದಿವೆ ಎಂದು ಸಚಿವರು ಒಪ್ಪಿಕೊಂಡಿದ್ದಾರೆ. ಆದರೆ ಮತ್ತೆ ಅರ್ಜಿಗಳನ್ನು ಕೊಡುವುದಕ್ಕೆ ದಿನಾಂಕ ಏಕೆ ಮುಂದುವರಿಸಿದ್ದಾರೆ? ಕೆಲವರಿಂದ ಅಪ್ಲಿಕೇಷನ್ಸ್ ಬಂದಿಲ್ಲ ಎಂಬ ಉದ್ದೇಶದಿಂದಲೋ ಅಥವಾ ಮತ್ತೆ ಯಾವ ಕಾರಣ ಎಂಬುದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ:- ಮಾನ್ಯ ಸಭಾಪತಿಗಳೇ, ಸಾರ್ವಜನಿಕರಿಗೆ ಸಾಕಷ್ಟು ಅವಕಾಶ ಕೊಡುವ ದೃಷ್ಟಿಯಿಂದ ಸಮಯವನ್ನು ಮುಂದಕ್ಕೆ ಹಾಕಿದ್ದೇವೆ. ಈಗ 271 ಅರ್ಜಿಗಳು ಬಂದಿವೆ. ಹೆಚ್ಚು ಸಮಯಾವಕಾಶ ಕೊಡೋಣ ಎನ್ನತಕ್ಕಂಥ ಉದ್ದೇಶದಿಂದ ಮಾಡಿದೆ. ಅದನ್ನು ಸಾರ್ವಜನಿಕರು ಉಪಯೋಗಿಸಿಕೊಳ್ಳಲಿ.

ವಿಷಯ:- ಬಾದಾಮಿ ತಾಲ್ಲೂಕು ಕೆರೂರು ಪಟ್ಟಣದಲ್ಲಿ ಬಡ ನೇಕಾರರ ಆರ್ಥಿಕ ಸುಧಾರಣೆ.

277 (2037) ಶ್ರೀ ಬಿ.ಬಿ. ಚಿಮ್ಮನ ಕಟ್ಟಿ (ಬಾದಾಮಿ):- ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಾದಾಮಿ ತಾಲ್ಲೂಕು ಕೆರೂರು ಪಟ್ಟಣದಲ್ಲಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ಶಾಖೆಯನ್ನು ಯಾವ ವರ್ಷದಲ್ಲಿ ಪ್ರಾರಂಭಿಸಲಾಗಿದೆ?

ಆ) ಅಂದಿನಿಂದ ಇಂದಿನವರೆಗೂ ಯಾವ ವಿಧದಲ್ಲಿ ಬಡ ನೇಕಾರರಿಗೆ ಸೌಲಭ್ಯ ಸಿಕ್ಕಿದೆ, 1992-93, 1993-94 ಹಾಗೂ 1995-96ನೇ ಸಾಲಿನ ವಿವರ ನೀಡುವುದು.

ಇ) ಕೆರೂರು ಪಟ್ಟಣದಲ್ಲಿಯ ಬಡ ನೇಕಾರರ ಆರ್ಥಿಕ ಸುಧಾರಣೆಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಈ) 1996-97ನೇ ಸಾಲಿನಲ್ಲಿ ಸರ್ಕಾರದವರು ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಎಂ.ಎಸ್. ಪಾಟೀಲ್ (ಜವಳಿ ಸಚಿವರು):-

ಅ) 1981

ಆ) ನಿಗಮದಲ್ಲಿ ಆಳವಡಿಸಿಕೊಂಡು ಕಾರ್ಯನಿರತವಾಗಿರುವ ನೇಕಾರರಿಗೆ ಕಚ್ಚಾ ಮಾಲು ಪೂರೈಕೆ ಮಾಡಿ, ಅವರು ಉತ್ಪಾದಿಸಿದ ಬಟ್ಟೆಗಳಿಗೆ ನೇಯ್ಗೆ ಮಜೂರಿ ಪಾವತಿ ಮಾಡಿ, ಮಾರಾಟಕ್ಕೆ ಅಂಗೀಕರಿಸಲಾಗುತ್ತಿದೆ. ಇದಲ್ಲದೆ, ಈ ಕೆಳಗಿನ ಸೌಲಭ್ಯಗಳನ್ನು ವಿಸ್ತರಿಸಲಾಗಿದೆ.

1) ಆಧುನೀಕರಿಸಿದ ಮಗ್ಗ ಸಲಕರಣೆಗಳನ್ನು ರಿಯಾಯಿತಿ ದರದಲ್ಲಿ ಒದಗಿಸುವುದು.

2) ಮನೆಯಿಲ್ಲದ ನೇಕಾರರಿಗೆ ವಸತಿ ನೀಡುವಿಕೆ ಮತ್ತು ಕಾರ್ಯಾಗಾರ ಒದಗಿಸುವುದು.

3) ಮನೆಯಿರುವ ನೇಕಾರರಿಗೆ ಮನೆಗೆ ಹೊಂದಿಕೊಂಡಂತೆ ಕಾರ್ಯಾಗಾರ ಒದಗಿಸುವಿಕೆ.

4) ಉಳಿತಾಯ ಯೋಜನೆ, ಗುಂಪು ಉಳಿತಾಯ ಮತ್ತು ವಿಮೆ ಯೋಜನೆ ಹಾಗೂ ಗ್ರಾಮೀಣ ಕುಶಲಕರ್ಮಿಗಳಿಗೆ ವಿಮೆ ಯೋಜನೆಯನ್ವಯ ಸೌಲಭ್ಯ ನೀಡುವಿಕೆ.